ಇದು ತೀರಾ ಬಡವರಿಗೋಸ್ಕರ ಪ್ರಾರಂಭವಾದಂಥ ಕಾರ್ಯಕ್ರಮ. ಈ ಕಾರ್ಯಕ್ರಮದಲ್ಲಿ ಬಂಗಾರಪ್ಪನವರ ಕಾಲದಲ್ಲಿ ಒಂದೊಂದು ಕ್ಷೇತ್ರಕ್ಕೂ ಒಂದು ಸಾವಿರ ಕನೆಕ್ಷನ್ ಕೊಡಿಸಬೇಕೆಂದು ಹೇಳಿ ಹಿಂದೆ ಇದ್ದ ನೂರು, ನೂರೈವತ್ತು ಕನೆಕ್ಷನ್‌ಗಳನ್ನು ಹೆಚ್ಚು ಮಾಡಿ ಒಂದು ಸಾವಿರ ಫಲಾನುಭವಿಗಳ ಕನೆಕ್ಷನ್ ಮಾಡಿರುವುದು ನಿಜ. ಈ ಸದನದ ಗೌರವಾನ್ವಿತ ಸದಸ್ಯರುಗಳ ಭಾವನೆಗಳನ್ನು ಸರ್ಕಾರ ಅರ್ಥ ಮಾಡಿಕೊಂಡಿದೆ. ಈ ಯೋಜನೆಯಲ್ಲಿ ಒಂದೋ ಎರಡೋ ಪಾಯಿಂಟ್ಸ್‌ಗಳನ್ನು ಬಲ್ಬ್‌ಗಳಿಗೋ, ಅಥವಾ ಟಿ.ವಿ.ಗೇ ಇರಬಹುದೋ ಮತ್ತೊಂದಕ್ಕೆ ಇರಬಹುದು, ಒಟ್ಟಿನಲ್ಲಿ ಎರಡು ಪಾಯಿಂಟ್ಸ್ ಕೊಡಬೇಕು, ಕೊಟ್ಟ ಮೇಲೆ ಎಷ್ಟು ಯುನಿಟ್ಸ್‌ಗಳನ್ನು ಕೊಡಬೇಕು, ಯಾವ ಕಾಸ್ಟ್‌ನಲ್ಲಿ ಕೊಡಬೇಕು ಎನ್ನುವುದರ ಬಗ್ಗೆ ಚರ್ಚೆ ನಡೆಯುತ್ತಿದೆ. ಸಧ್ಯದಲ್ಲಿಯೇ ಇದರ ಬಗ್ಗೆ ಸರ್ಕಾರ ತೀರ್ಮಾನಕ್ಕೆ ಬರುತ್ತದೆ. ಬಡವರಿಗೆ ಅನ್ಯಾಯವಾಗದೆ ಇರುವಂಥ ರೀತಿಯಲ್ಲಿ ನಾವು ಕ್ರಮ ತೆಗೆದುಕೊಳ್ಳುತ್ತೇವೆ ಎನ್ನತಕ್ಕಂಥ ಭರವಸೆಯನ್ನು ಮಾನ್ಯ ಅಧ್ಯಕ್ಷರ ಮೂಲಕ ಸದಸ್ಯರುಗಳಿಗೆ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಅವರಿಂದ ಯಾವುದೇ ರೀತಿಯಲ್ಲೂ ಹಣ ವಸೂಲಿ ಮಾಡುವುದಿಲ್ಲವೆಂದು ಹೇಳಬೇಕು. ದುಡ್ಡು ಕಟ್ಟದೇ ಇರುವವರಿಗೆ ಕನೆಕ್ಷನ್ ಕೊಡಿಸುತ್ತೀರಾ ಎಂಬ ಬಗ್ಗೆ ಹೇಳಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಕನೆಕ್ಷನ್ ಕೊಡುತ್ತೇವೆ.

ಗೊಂದಲ

ಅಧ್ಯಕ್ಷರು : ಈಗ ಮುಂದಿನ ಪ್ರಶ್ನೆಗೆ ಹೋಗಿದ್ದೇನೆ. ಈಗ ಈ ಪ್ರಶ್ನೆಯನ್ನು ಮುಕ್ತಾಯ ಮಾಡಿದ್ದೇನೆ. ಮಾನ್ಯ ಲಾಲಾಜಿ ಮೆಂಡ್‌ರವರೆ,

ಶ್ರೀ ಬಿ.ಎಸ್. ಯಡಿಯೂರಪ್ಪ: ಡಿಸ್‌ಕನೆಕ್ಟ್ ಮಾಡಿರುವ ಕಡೆ ಕನೆಕ್ಷನ್ ಕೊಡಿಸುತ್ತಾರೆಯೇ ಎಂಬ ಬಗ್ಗೆ ಹೇಳಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಇಲ್ಲಿ ಎರಡು ವಿಚಾರ ಇದೆ. ಒಂದು ಈಗಾಗಲೇ ನಾಲ್ಕು ಸಾವಿರ, ಐದು ಸಾವಿರ ರೂಪಾಯಿಗಳ ಬಿಲ್.

ಅಧ್ಯಕ್ಷರು : ಈಗ ಇಲ್ಲಿ ಇನ್ನೊಂದು ಪ್ರಶ್ನೆ ಏನೆಂದರೆ, ಈಗಾಗಲೇ ನಾನು ಮುಂದಿನ ಪ್ರಶ್ನೆಗೆ ಹೋಗಿ ಸದಸ್ಯರ ಹೆಸರನ್ನು ಕರೆದಿದ್ದೇನೆ. ಇದೇ ತರಹ ಮತ್ತೆ ಮತ್ತೆ ನಿಂತು ಅವರು ಕೇಳತಕ್ಕಂಥದ್ದು, ನೀವು ಹೇಳತಕ್ಕಂಥದ್ದು ನಡೆಯುತ್ತಲೇ ಇದ್ದರೆ ಈ ಸಭೆಯನ್ನು ನಡೆಸುವುದು ಕಷ್ಟ

ಉಡುಪಿ ಜಿಲ್ಲೆ ನಂದಿಕೂರು ಸರ್ವೀಸ್ ಸ್ಟೇಷನ್

114 (490) : ಶ್ರೀ ಲಾಲ್‌ಜಿ ಆರ್. ಮೆಂಡನ್ (ಕಾಪು) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉಡುಪಿ ಜಿಲ್ಲೆ ನಂದಿಕೂರಿನಲ್ಲಿ ನಿರ್ಮಿಸಲು ಉದ್ದೇಶಿಸಿರುವ ವಿದ್ಯುತ್ ಸರ್ವೀಸ್ ಸ್ಟೇಷನ್ ಪ್ರಾರಂಭಿಸುವ ಯೋಜನೆ ಈಗ ಯಾವ ಹಂತದಲ್ಲಿದೆ;

ಆ) ಈ ಸರ್ವೀಸ್ ಸ್ಟೇಷನ್‌ನಿಂದ ವಿದ್ಯುತ್ ಬಳಕೆದಾರರಿಗೆ ಯಾವಾಗಿನಿಂದ ನಿರಂತರ ವಿದ್ಯುತ್ ಸಂಪರ್ಕ ನೀಡಲಾಗುವುದು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಉಡುಪಿ ಜಿಲ್ಲೆಯ ನಂದಿಕೂರಿನಲ್ಲಿ ಒಂದು 110/11 ಕೆ.ವಿ. ವಿದ್ಯುತ್ ಸಬ್–ಸ್ಟೇಷನ್ನು ಸ್ಥಾಪಿಸಲು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ತಾಂತ್ರಿಕ ಸಮಿತಿಯು ಅಕ್ಟೋಬರ್ 1999ರಲ್ಲಿ ಅನುಮೋದನೆಯನ್ನು ನೀಡಿರುತ್ತದೆ. ಈ-ಮುಂಚೆ ಕೊಜೆಂಟ್ರಿಕ್ಸ್ ಸಂಸ್ಥೆಯ ಮತಿಯಿಂದ ನಂದಿಕೂರಿನಲ್ಲಿ ಒಂದು ಕಲ್ಲಿದ್ದಲು ಆಧಾರಿತ ಶಾಖೋತ್ಪನ್ನ ವಿದ್ಯುತ್ ಕೇಂದ್ರವನ್ನು ಸ್ಥಾಪನೆ ಮಾಡಲು ಉದ್ದೇಶಿಸಲಾಗಿತ್ತು. ಆ ಸಮಯದಲ್ಲಿ ಸದರಿ ಸಂಸ್ಥೆಗೆ ಮುಖ್ಯವಾಗಿ ನಿರ್ಮಾಣ ಕಾರ್ಯಗಳಿಗೆ ಹಾಗೂ ಕಾಲೋನಿಯ ಬಳಕೆಗಾಗಿ ಬೇಕಾಗುವ ವಿದ್ಯುತ್ ಸರಬರಾಜನ್ನು ವ್ಯವಸ್ಥೆ ಮಾಡಲು ಮತ್ತು ಸುತ್ತ–ಮುತ್ತಲ ಪ್ರದೇಶಗಳಿಗೆ ವಿದ್ಯುತ್ ವಿತರಿಸಲು ಈ ವಿದ್ಯುತ್ ಸಬ್–ಸ್ಟೇಷನ್ನಿನ ನಿರ್ಮಾಣವನ್ನು ಕೈಗೊಳ್ಳಲು ಉದ್ದೇಶಿಸಲಾಗಿತ್ತು. ಆದರೆ ಕೊಜೆಂಟ್ರಿಕ್ಸ್ ಸಂಸ್ಥೆಯಿಂದ ಸ್ಥಾಪಿತಗೊಳ್ಳಬೇಕಾಗಿದ್ದ ಮೇಲ್ಕಂಡ ಶಾಖೋತ್ಪನ್ನ ವಿದ್ಯುತ್ ಉತ್ಪಾದನಾ ಯೋಜನೆಯನ್ನು ಈಗ ಕೈ ಬಿಟ್ಟಿರುವುದರಿಂದ ಪ್ರಸ್ತುತ ನಂದಿಕೂರಿನಲ್ಲಿ ವಿದ್ಯುತ್ ಸಬ್–ಸ್ಟೇಷನ್ನಿನ ನಿರ್ಮಾಣ ಕಾರ್ಯವನ್ನು ತಡೆಹಿಡಿಯಲಾಗಿದೆ.

ಆ) ಕ.ವಿ.ಪ್ರ.ನಿ.ನಿ.ಯ ತಾಂತ್ರಿಕ ಸಲಹಾ ಸಮಿತಿಯ ಅಭಿಪ್ರಾಯವನ್ನು ಈ ವಿಷಯದಲ್ಲಿ ಪಡೆಯಲಾಗುತ್ತಿದೆ. ಸದರಿ ಸಲಹಾ ಸಮಿತಿಯು ನೀಡುವ ಅಭಿಪ್ರಾಯವನ್ನು ಅನುಸರಿಸಿ. ಮುಂದಿನ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕಾಗಿರುತ್ತದೆ. ತಾಂತ್ರಿಕ ಸಲಹಾ ಸಮಿತಿಯು ನಂದಿಕೂರಿನಲ್ಲಿ 110/11 ಕೆ.ವಿ. ವಿದ್ಯುತ್ ಸಬ್–ಸ್ಟೇಷನ್ನಿನ ನಿರ್ಮಾಣ ಮಾಡುವಂತೆ ಅಭಿಪ್ರಾಯಪಟ್ಟಲ್ಲಿ, ಇದಕ್ಕೆ ಸಂಬಂಧಿಸಿದಂತೆ ಪುನರ್ ವಿಮರ್ಶಿತ ಯೋಜನಾ ವರದಿಯನ್ನು ಸಿದ್ಧಪಡಿಸಿ ಆರ್ಥಿಕ ಸಂಸ್ಥೆಗಳಿಂದ ಸಾಲ ಸೌಲಭ್ಯವನ್ನು ಪಡೆಯಲು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಲಾಲ್‌ಜಿ ಆರ್. ಮೆಂಡನ್ : ಮಾನ್ಯ ಅಧ್ಯಕ್ಷರೆ, ಉಡುಪಿ ಜಿಲ್ಲೆಯ ನಂದಿಕೂರಿನಲ್ಲಿ ಈಗಾಗಲೇ 110 ಕೆ.ವಿ.ಯ ವಿದ್ಯುತ್ ಸಬ್ ಸ್ಟೇಷನ್‌ನನ್ನು ನಿರ್ಮಿಸುವ ಬಗ್ಗೆ ಈಗಾಗಲೇ ಪ್ರಸ್ತಾವನೆಯನ್ನು ಕಳುಹಿಸಲಾಗಿದೆ. ಈಗಾಗಲೇ ನಮ್ಮ ಕಾಪು ಕ್ಷೇತ್ರದ ಶಿರ್ವಾದಲ್ಲಿ ಒಂದು ಸಬ್ ಸ್ಟೇಷನ್ ಇದೆ. ಅಲ್ಲಿನ ಜನಸಂಖ್ಯೆಯ ಆಧಾರದ ಮೇಲೆ ಮತ್ತು ಗ್ರಾಹಕರ ಬೇಡಿಕೆಯ ಪ್ರಕಾರ, ಸುಮಾರು ಐವತ್ತು ಸಾವಿರ ಗ್ರಾಹಕರು ಈಗಾಗಲೇ ಇದ್ದಾರೆ, ಇವರು ವೇಟಿಂಗ್ ಲಿಸ್ಟ್‌ನಲ್ಲಿ ಇದ್ದಾರೆ, ಅರ್ಜಿಗಳನ್ನು ಹಾಕಿದ್ದಾರೆ, ಮತ್ತೆ ಲೋವೋಲ್ಟೇಜ್ ಸಮಸ್ಯೆ ಇದೆ. ಆ ದೃಷ್ಟಿಯಿಂದ ಆದಷ್ಟು

ಶೀಘ್ರವಾಗಿ ನಂದಿಕೂರುನಲ್ಲಿ ಸಬ್ ಸ್ಟೇಷನ್ ಅನ್ನು ಮಾಡಿಕೊಡಬೇಕೆಂದು ಮಾನ್ಯ ಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ. ಇದರ ಬಗ್ಗೆ ಮಾನ್ಯ ಸಚಿವರು ಉಡುಪಿ ಜಿಲ್ಲೆಗೆ ಬಂದಾಗ ಪ್ರಸ್ತಾಪ ಮಾಡಿದ್ದೇನೆ. ಮಾನ್ಯ ಸಚಿವರು ಆಶ್ವಾಸನೆಯನ್ನು ಕೊಟ್ಟಿದ್ದಾರೆ, ಅವರು ಅಧಿಕೃತವಾಗಿ ಭರವಸೆಯನ್ನು ಕೊಡಬೇಕಾಗಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಇದನ್ನು ಆದ್ಯತೆಯ ಮೇಲೆ ಕ್ರಮ ಕೈಗೊಳ್ಳಲಾಗುತ್ತದೆ.

ಬಂಟ್ವಾಳ ತಾಲ್ಲೂಕಿನಲ್ಲಿ ನೇತ್ರಾವತಿ ನದಿಗೆ ಪಿರಿಪೇಡ್ ಡ್ಯಾಂ ನಿರ್ಮಾಣ

115(186) : ಶ್ರೀ ಪದ್ಮನಾಭ ಕೊಟ್ಟಾರಿ ಕೆ. (ವಿಟ್ಲ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೃಷಿ ಮತ್ತು ಕುಡಿಯುವ ನೀರಿನ ಸೌಕರ್ಯಕ್ಕಾಗಿ ಮತ್ತು ಆಂತರ್ಜಲ ಅಭಿವೃದ್ಧಿಗಾಗಿ ಯೋಜನೆಗಳನ್ನೇನಾದರೂ ಸರ್ಕಾರ ರೂಪಿಸಿದೆಯೇ; (ವಿವರಗಳನ್ನು ನೀಡುವುದು)

ಆ) ಜಿಲ್ಲೆಯ ಬಂಟ್ವಾಳ ತಾಲ್ಲೂಕಿನಲ್ಲಿ ನೇತ್ರಾವತಿ ನದಿಗೆ ಪಿರಿಪೇಡ್ ಡ್ಯಾಂ ನಿರ್ಮಿಸುವ ಯೋಜನೆ ಸರ್ಕಾರದ ಮುಂದಿದೆಯೇ; (ವಿವರಗಳನ್ನು ನೀಡುವುದು)?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಸಣ್ಣ ನೀರಾವರಿ ಇಲಾಖೆಯ ವತಿಯಿಂದ ಈ ಕೆಳಕಂಡ ಯೋಜನೆಗಳ ಅಡಿಯಲ್ಲಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.

1. ನಬಾರ್ಡ್‌ನ ಆರ್.ಐ.ಡಿ.ಎಫ್. ಸಹಾಯ ಯೋಜನೆ
2. ರೈತ ಕಾಯಕ ಕೆರೆ ಯೋಜನೆ
3. 11ನೇ ಹಣಕಾಸು ಧನಸಹಾಯ ಯೋಜನೆ
4. ಇತರ ಯೋಜನೆಗಳಡಿಯಲ್ಲಿ ಕೈಗೊಂಡ ಕಾಮಗಾರಿಗಳು
5. ಪ್ರವಾಹ ನಿಯಂತ್ರಣ ಅಡಿ ಕೈಗೊಂಡ ಕಾಮಗಾರಿಗಳು

ಕಾಮಗಾರಿಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಇಲ್ಲ